ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2019-20** **ದಿನಾಂಕ: 03-10-2019**

# ಪತ್ರಿಕಾ ಆಮಂತ್ರಣ

1. **ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಧಾರಾಡ, ರಾಯಚೂರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ, ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟೆ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ಇವರು ಸಂಯುಕ್ತಾಶ್ರಯದಲ್ಲಿ ಶೂನ್ಯ ಬಂಡವಾಳ ಮತ್ತು ನೈಸರ್ಗಿಕ ಕೃಷಿಯ ಕಾರ್ಯಾಗಾರ.**

**ಉದ್ಘಾಟನೆ:**

**ಬ್ರಿಜೇಶ್ ಕುಮಾರ್ ದೀಕ್ಷಿತ್, ಐ.ಎಫ್.ಎಸ್.**
**ಆಯುಕ್ತರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ**

**ವಿಶೇಷ ಅತಿಥಿಗಳು:**

**ಡಾ. ಎಂ.ಬಿ. ಚಟ್ಟಿ,**
**ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಧಾರವಾಡ,**

**ಬಿ.ವೈ.ಶ್ರೀನಿವಾಸ್,**
**ನಿರ್ದೇಶಕರು, ಕೃಷಿ ಇಲಾಖೆ**

**ಅಧ್ಯಕ್ಷತೆ:**

**ಪ್ರೊ. ವಿ.ವೀರಭದ್ರಯ್ಯ, ಕೃಷಿ ತಂತ್ರಜ್ಞರ ಸಂಸ್ಥೆ, ಬೆಂಗಳೂರು**

**ದಿನಾಂಕ: 04-10-2019, ಶುಕ್ರವಾರ ಸಮಯ: ಬೆಳಿಗ್ಗೆ 10-00 ಗಂಟೆಗೆ.**
**ಸ್ಥಳ: ಡಾ. ಹೆಚ್. ಆರ್. ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆ, ನಂ 15 ಕ್ವೀನ್ಸ್ ರಸ್ತೆ,.**
**ಬೆಂಗಳೂರು.**

2. <u>ಪತ್ರಿಕಾಗೋಷ್ಠಿ:</u>

ಬಿ. ಜೆ. ಪುಟ್ಟಸ್ವಾಮಿ,
ಯೋಜನಾ ಮಂಡಳಿಯ ಉಪಾಧ್ಯಕ್ಷರು

ದಿನಾಂಕ: 04-10-2019, ಶುಕ್ರವಾರ ಸಮಯ: ಅಪರಾಹ್ನ 12-00 ಗಂಟೆಗೆ.

ಸ್ಥಳ: ಕೊಠಡಿ ಸಂ. 234, ವಿಕಾಸಸೌಧ, ಬೆಂಗಳೂರು.

3. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು ಹಂಸಜ್ಯೋತಿ (ರಿ), ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ "ಯುವ ಸೌರಭ" ಕಾರ್ಯಕ್ರಮ:

<u>ಉದ್ಘಾಟನೆ:</u>

ಎಸ್.ಆರ್. ವಿಶ್ವನಾಥ,
ಶಾಸಕರು, ವಿಧಾನಸಭೆ, ಯಲಹಂಕ ವಿಧಾನಸಭಾ ಕ್ಷೇತ್ರ.

<u>ಅಧ್ಯಕ್ಷತೆ:</u>

ಎಂ. ಸತೀಶ್,
ಸದಸ್ಯರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಯಲಹಂಕ ಉಪನಗರ.

ದಿನಾಂಕ: 04-10-2019, ಶುಕ್ರವಾರ ಸಮಯ: ಅಪರಾಹ್ನ 12-00 ಗಂಟೆಗೆ.
ಸ್ಥಳ: ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಸಭಾಂಗಣ, ಯಲಹಂಕ ಉಪನಗರ, ಬೆಂಗಳೂರು.

<u>ಪತ್ರಿಕಾ ಪ್ರಕಟಣೆ</u>

## <u>ಅಕ್ಟೋಬರ್ 13 ರಂದು</u>
## <u>ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ</u>

ಬೆಂಗಳೂರು ಅಕ್ಟೋಬರ್ 3 (ಕರ್ನಾಟಕ ವಾರ್ತೆ)

ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯವು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಎಲ್ಲಾ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಸರ್ಕಾರದ ವತಿಯಿಂದ ಆಚರಿಸುತ್ತಿದೆ.

ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಅಕ್ಟೋಬರ್ 13 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಈ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಸಮಾರಂಭದಲ್ಲಿ ಸಚಿವ ಸಂಪುಟದ ಸದಸ್ಯರು, ಸಂಸದರು, ಶಾಸಕರುಗಳು ಸೇರಿದಂತೆ ಅನೇಕ ಹಿರಿಯ ಗಣ್ಯರು ಪಾಲ್ಗೊಳ್ಳಲಿದ್ದಾರೆ.

## ಎಸಿಬಿಯಿಂದ ಭ್ರಷ್ಟಾಚಾರ ಆರೋಪಿತ 3 ಅಧಿಕಾರಿಗಳ ವಿರುದ್ಧ ದಾಳಿ

## ಇಂದು ರಾಜ್ಯಾದ್ಯಂತ 16 ಸ್ಥಳಗಳಲ್ಲಿ ವಿವಿಧ ಎಸಿಬಿ ತಂಡಗಳಿಂದ ಕಾರ್ಯಾಚರಣೆ

**ಬೆಂಗಳೂರು, ಅಕ್ಟೋಬರ್ 3 ( ಕರ್ನಾಟಕ ವಾರ್ತೆ ) :**

ದಿನಾಂಕ: 03.10.2019 ರಂದು ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳವು ರಾಜ್ಯದ 3 ವಿವಿಧ ಸರ್ಕಾರಿ ನೌಕರರು ತಮ್ಮ ಬಲ್ಲ ಮೂಲಗಳಿಗಿಂತ ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ 16 ಸ್ಥಳಗಳ ಮೇಲೆ ಇಂದು ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಜಾಗಗಳ ಮತ್ತು ಸರ್ಕಾರಿ ಅಧಿಕಾರಿಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. ಶ್ರೀ ಎಸ್.ಮೂರ್ತಿ, ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ, ಬೆಂಗಳೂರು (ಪ್ರಸ್ತುತ ಅಮಾನತ್ತಿನಲ್ಲಿರುತ್ತಾರೆ) ಇವರ ಬೆಂಗಳೂರು ನಗರದ ಸದಾಶಿವ ನಗರದಲ್ಲಿನ ವಾಸದ ಮನೆ, ಹೆಚ್.ಎಂ.ಟಿ ಕಾಲೋನಿ ಯಲ್ಲಿನ ಮನೆ ಹಾಗೂ ಓಂ ಶಕ್ತಿ ಅಪಾರ್ಟ್‌ಮೆಂಟ್‌ನಲ್ಲಿರುವ 2 ಫ್ಲಾಟ್ ಮತ್ತು ಕೊಡಗು ಜಿಲ್ಲೆಯ ಕೆ. ನಿಡುಗಣೆ ಗ್ರಾಮದಲ್ಲಿನ ಕಾಫಿ ತೋಟ.
2. ಶ್ರೀ. ಕೆ. ಹನುಮಂತಪ್ಪ, ಕಾರ್ಯ ನಿರ್ವಾಹಕ ಅಭಿಯಂತರರು, ಹೂವಿನ ಹಡಗಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಬಳ್ಳಾರಿ ಜಿಲ್ಲೆ.
   ಇವರ ಹೊಸಪೇಟೆ ನಗರದ ವಾಸದ ಮನೆ ಹಾಗೂ ಹೂವಿನ ಹಡಗಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ ಕಛೇರಿ ಮತ್ತು ಹೂವಿನ ಹಡಗಲಿಯ ಎಸ್.ಕೆ.ಆರ್.ಹೆಚ್ ಸ್ಕೂಲ್, ನಾಗತಿ ಬಸಾಪುರದ ಸುಮಶ್ರೀ ಪತ್ತಿನ ಸೌಹಾರ್ದ ಕೋ-ಆಪರೇಟೀವ್ ಬ್ಯಾಂಕ್, ನಾಗತಿ ಬಸಾಪುರದಲ್ಲಿನ ಹಳೆ ಶಾಲೆ ಹಾಗೂ ಹೂವಿನ ಹಡಗಲಿಯ ಹಳೆ ಮನೆ.
3. ಶ್ರೀ. ವಿಜಯ ರೆಡ್ಡಿ, ಕಿರಿಯ ಅಭಿಯಂತರರು (ರಾಜ್ಯ ಸರ್ಕಾರಿ ದಿನಗೂಲಿ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ, ಹುಮನಾಬಾದ್ ತಾಲ್ಲೂಕ್, ಬೀದರ್ ಜಿಲ್ಲೆ.

ಇವರ ಹುಮನಾಬಾದ್ ನಗರದಲ್ಲಿನ ನಿವಾಸ ಹಾಗೂ ಹುಮನಾಬಾದ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ-ವಿಭಾಗ ಕಛೇರಿ, ನಿರ್ನಾ ಗ್ರಾಮದ ವಾಸದ ಮನೆ ಹಾಗೂ ನಿರ್ನಾ ಗ್ರಾಮದಲ್ಲಿರುವ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಫಾರ್ಮ್ ಹೌಸ್.

ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 3 ( ಕರ್ನಾಟಕ ವಾರ್ತೆ ) :

ಕಂದಾಯ ಮತ್ತು ಪೌರಾಡಳಿತ ಸಚಿವ ಶ್ರೀ ಆರ್. ಅಶೋಕ್ ಅವರು ಅಕ್ಟೋಬರ್ 4 ರಂದು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

## ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 3 ( ಕರ್ನಾಟಕ ವಾರ್ತೆ ) :

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವ ಶ್ರೀ ಜಗದೀಶ್ ಶೆಟ್ಟರ್ ಅವರು ಅಕ್ಟೋಬರ್ 4 ರಂದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪ್ರವಾಸಕೈಗೊಳ್ಳುವರು.